ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
ಹಸುವಿನ ಹಾಲಿಗೂ, ಕಬ್ಬಿನ ಹಾಲಿಗೂ ಇರುವ ವ್ಯತ್ಯಾಸವೇನು?



ಕಬ್ಬಿನ ಹಾಲು ಹುಳಿ ಹಿಂಡಿದವರಿಗೂ ರುಚಿ ನೀಡುತ್ತದೆ.

ಸುನಿತಾ ಬಾಣಿ, ಬೆಂಗಳೂರು
ಹೂವಿಗೂ, ಹಾವಿಗೂ, ಹೆಣ್ಣಿಗೂ ಏನು ಸಾಮ್ಯತೆ?
ತನ್ನತ್ತಲೇ ದೃಷ್ಟಿ ಸೆಳೆದುಕೊಳ್ಳುವ ಗುಣ.

ದೇವೇಂದ್ರ, ಕಡೂರು
ಎಷ್ಟೇ ಉಳಿಸಿ, ಗಳಿಸಿದ್ದರೂ ಎಷ್ಟು ತಿನ್ನಬೇಕೋ ಅಷ್ಟೇ ತಿನ್ನುವುದಂತೆ?
ಹಾಗೇನಿಲ್ಲ. ಹೆಚ್ಚೂ ತಿನ್ನುತ್ತಾರೆ. ಶಕ್ತರು ಜೀರ್ಣಿಸಿಕೊಳ್ಳುತ್ತಾರೆ, ಅಶಕ್ತರು ಕಾರಿಕೊಳ್ಳುತ್ತಾರೆ.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ
ಮದುವೆ, ಗೃಹಪ್ರವೇಶ ಮಾಡಿದವರು ಸ್ವಸಂತೋಷಕ್ಕಾಗಿ ಪರಿಚಿತರಿಗೆ ಊಟ ಹಾಕಿಸುತ್ತಾರೆ. ನಾವೇಕೆ ಅವರಿಗೆ ಮುಯ್ಯಿ ಹಾಕಬೇಕು?



ಹೌದಲ್ಲವೇ! ಪ್ರತಿಸ್ಪಂದನದ ಕುರುಹಾಗಿ ಈವರೆಗೆ ಯಾವ ಪ್ರಾಣಿಯೂ ಅನ್ನ ಹಾಕಿದವನಿಗೆ ಮುಯ್ಯಿ ಹಾಕದಿರುವಾಗ....

ಎಚ್.ಆರ್. ದೇಸಾಯಿ, ರಾಯಚೂರು
ಕೆಳಗೆ ಬಿದ್ದಿದ್ದನ್ನು ತಿನ್ನಬಾರದಂತೆ. ಆದರೆ ಕೆಳಗೆ ಬೆಳೆದಿದ್ದನ್ನು ತಿನ್ನುವರಲ್ಲಾ....?
ಅದು ಬೆಳೆದಿದೆ, ಇದು ಬಿದ್ದಿದೆ; ವರ್ಧನೆಗಿರುವ ಮಾನ್ಯತೆ ಪತನಕ್ಕಿಲ್ಲ.

ದಿನೇಶ್, ಗುಡ್ಡದೂರು
ವೈನ್‌ಶಾಪ್ ಮತ್ತು ಬಾರ್‌ಗಳಿಗೇಕೆ ದೇವರ ಹೆಸರನ್ನು ಇಡುತ್ತಾರೆ?
ಅಲ್ಲಿಗೆ ಬಂದವರನ್ನು ದೇವರೇ ಕಾಪಾಡಬೇಕು ಎಂದು ಸೂಚಿಸಲು.

ವಿ. ಹೇಮಂತಕುಮಾರ್, ಬೆಂಗಳೂರು
ಪ ಪತ್ನಿಯ ಹಿಂದೆಯೇ; ತಿ ತಿರುಗುವವನಿಗೇ 'ಪತಿ' ಎಂದು ಕರೆಯಬಹುದಲ್ಲವೆ?
ಪ ಪರಪತ್ನಿಯೆಂದರೆ; ತಿ ತಿರುತಿರುಗಿ ನೋಡುವವನಿಗೂ 'ಪತಿ' ಎನ್ನಬಹುದು.

ನಾರಾಯಣ ಯಾಜಿ, ಶಿರಾಲಿ
ವಿದ್ಯೆಯಿಲ್ಲದವ ಹದ್ದಿಗಿಂತ ಕಡೆ ಎನ್ನುತ್ತಿದ್ದರು. ಈಗ ಕಾಸು ಇಲ್ಲದವ ಹದ್ದಿಗಿಂತ ಕಡೆ. ಏನಂತೀರಾ ರಾಮ್?
ಇನ್ನೂ ಬದಲಾಗಿದೆ; ಈಗ ಹದ್ದು ಮೀರದವನು ಹದ್ದಿಗಿಂತ ಕಡೆ.

ಮೇಟಿ ಕೊಟ್ರಪ್ಪ, ಬಸರಕೋಡು
ಕಾವಿ ಕಾಮಿ ವ್ಯತ್ಯಾಸವೇನು?
ಮಣಿ ರಮಣಿಯ ಧ್ಯಾನ.

ರಮೇಶ ಬೊಂಗಾಳೆ, ಬೈಲಹೊಂಗಲ
ಮನಸ್ಸು ಎಂಬ ಕನ್ನಡಿ ಒಡೆದರೆ ಏನಾಗುತ್ತದೆ?
ಎರಡು ಮನಸ್ಸು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ನೋವುಗಳಿಗೆ ಎಕ್ಸ್‌ಪೈರಿ ಡೇಟ್ ಇರುತ್ತದೆಯೆ?
ಇರುತ್ತದೆ. ಕೆಲವು ನೋವುಗಳದು ಮಾತ್ರ ದೇಹದ ಎಕ್ಸ್‌ಪೈರಿ ಡೇಟ್‌ಗೆ ಹೊಂದಾಣಿಕೆಯಾಗಿರುತ್ತದೆ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
ಕ್ಷೀರಸಾಗರಕ್ಕೂ, ಪ್ರೇಮಸಾಗರಕ್ಕೂ ಇರುವ ವ್ಯತ್ಯಾಸವೇನು ಶಿವಾ?
ಕ್ಷೀರಸಾಗರಕ್ಕೆ ಇದುವರೆಗೆ ಯಾರೂ ಹುಳಿ ಹಿಂಡಿಲ್ಲ.

ನರಸಿಂಹ ಪೈ, ಕಾಸರಕೋಡ
ಕ್ಲಾಸ್‌ಮೇಟ್‌ಗೂ, ಗ್ಲಾಸ್‌ಮೇಟ್‌ಗೂ ಏನು ವ್ಯತ್ಯಾಸ?
ಅವನು ಬೋರ್ ಬೋರ್ ಅನ್ನುತ್ತಾನೆ; ಇವನು ಬಾರ್ ಬಾರ್ ಅನ್ನುತ್ತಾನೆ.

ರಮೇಶ್, ಹನುಮನಾಳು
ಅಳಿಯ ಮನೆ ತೊಳಿಯ ಎನ್ನುತ್ತಾರೆ. ಸೊಸೆ?
ಮನಕ್ಕೊಂದು ಹಸೆ.

## ಬಹುಮಾನಿತ ಪ್ರಶ್ನೆ

ಸಿ.ಎನ್. ವಿಜಯಲಕ್ಷ್ಮೀ, ಶಿವಮೊಗ್ಗ
ಹೆಣ್ಣು ದೇವರುಗಳನ್ನು ಪೂಜಿಸುವ ಈ ದೇಶದಲ್ಲೇ ಹೆಣ್ಣಿನ ಮೇಲೆ ಹೆಚ್ಚು ದೌರ್ಜನ್ಯ ನಡೆಯುತ್ತಿದೆಯಲ್ಲಾ, ಏಕೆ?
ಮೀನು ವಾಸಿಸುವುದು ನೀರಿನಲ್ಲಿ; ಬೇಯಿಸುವುದೂ ನೀರಿನಲ್ಲೇ.

ಸಾಲಿಗ್ರಾಮ ದೇವರಾಜು, ಮೈಸೂರು
ರಾಜಕಾರಣಿಗಳು ರಾಜೀನಾಮೆಯನ್ನು 'ತ್ಯಾಗಪತ್ರ' ಎಂದೇಕೆ ಕರೆಯುತ್ತಾರೆ?
'ತ್ಯಾಗ' ಎನ್ನುವುದಕ್ಕೆ 'ವಿಚ್ಛೇದನ' ಎಂದೂ ಅರ್ಥವಿದೆ. ಹುದ್ದೆಗೂ, ಇವರಿಗೂ ಡೈವೋರ್ಸ್ ಆಗಿರುತ್ತದಲ್ಲ.

ಎಸ್ಸೆನ್ ಮಹಾಬಲರಾವ್, ಅಗ್ರಹಾರ
ಹೆಂಡತಿಯ ಮೊಬೈಲ್‌ನಲ್ಲಿ ಯಾರದ್ದೋ ಗಂಡ.....?
ತನ್ನಮ್ಮನ ಗಂಡನೇ ಇರಬಹುದಲ್ಲ! ಗಂಡುಜಾತಿ ಇವೆರಡನ್ನು ಎಂದು ಬಿಟ್ಟೀತೋ ಶಂಕೆ, ಶಂಖ!

ಡಿ.ಎಲ್. ಚಂದ್ರಿಕಾ, ಬಳ್ಳಾರಿ
'ಗಾಂಧಿನಗರ'ದಲ್ಲಿ ಹೆಚ್ಚಾಗಿ ವೈನ್‌ಷಾಪ್, ಬಾರ್‌ಗಳೇ ಇವೆಯಲ್ಲಾ...?



ಅದು ಸ್ವದೇಶಿ ಚಳುವಳಿಯ ಅಂಗವಾಗಿ ವಿದೇಶಿ ಲಿಕ್ಕರ್‌ಗಳನ್ನು ಇಲ್ಲವಾಗಿಸುವ ಯತ್ನವಂತೆ.

ಮುರಲೀಧರ ಕುಲಕರ್ಣಿ, ಬೀದರ್
ಮೋದಿಯವರ ಪ್ಲಾಸ್ಟಿಕ್ ಮುಕ್ತ ಭಾರತದ ಕನಸು ನನಸಾಗುವುದೆ?
ಆಗಲೇ ಆಗಿದೆ. ಎಲ್ಲೆಡೆಯೂ ಪ್ಲಾಸ್ಟಿಕ್ ಮುಕ್ತವಾಗಿ ಕಂಡುಬರುತ್ತಿದೆ.

ಪಿ. ಜಯವಂತ ಪೈ, ಕುಂದಾಪುರ
ಸರ್ಕಾರಿ ಕಚೇರಿಗಳೇ ಏಕೆ ಸೋರುತ್ತವೆ?
ಏಕೆಂದರೆ ಕಚೇರಿಗಳ ಮೂಲ ನಿಯಮಗಳಲ್ಲಿ ಬಹಳ ರಂಧ್ರಗಳಿವೆ.

■ ರಾಮ್